ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 13/2022

ಸಿ.ಡಬ್ಲ್ಯೂ -3, ಪಿ.ಡಬ್ಲ್ಯೂ-3

ದಿಃ **10.09.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಸಂತೋಷ |
| ಗಂಡ/ತಂದೆಯ ಹೆಸರು | ಸದಾನಂದ |
| ವಯಸ್ಸು | 37 ವರ್ಷ |
| ಕೆಲಸ | ಖಾಸಗಿ ವ್ಯವಹಾರ |
| ವಾಸಸ್ಥಳ | ಬೈಲುಕುಪ್ಪೆ |

**( ಆರೋಪಿ ಗೈರುಹಾಜರಿದ್ದು, ಅವರ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು, ಅವರ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ).**

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:**

ಸಾಕ್ಷಿ ಒಂದು ದಾಖಲಾತಿಯನ್ನು ತೋರಿಸಿದ್ದು ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದಾರೆ. ಸದರಿ ದಾಖಲೆ ಮಹಜರ್ ಆಗಿದ್ದು ಮಹಜರ್ ನ್ನು ನಿಪಿ**2** ಎಂದು, ಸಾಕ್ಷಿ ಸಹಿಯನ್ನು ನಿಪಿ**2**(ಎ) ಎಂದು ಗುರುತಿಸಲಾಯಿತು. **2021** ನೇ ಇಸವಿಯ **6** ನೇ ತಿಂಗಳಿನಲ್ಲಿ ಕುಪ್ಪೆಗ್ರಾಮದಲ್ಲಿ ಒಂದು ಅಪಘಾತವಾದ ಬಗ್ಗೆ ಪೊಲೀಸರು ಮಹಜರ್ ಮಾಡುತ್ತಿದ್ದರು ಆಗ ನಾನು ಸಹಿ ಹಾಕಿರುತ್ತೇನೆ. ನಾನು ಸಹಿ ಹಾಕುವ ಸಮಯದಲ್ಲಿ ನನ್ನೊಂದಿಗೆ ಚಾಸಾ**4** ರವರು ಇದ್ದರು. ನಾನು ಸಹಿ ಹಾಕುವಾಗ ಸಮಯ **2** ಗಂಟೆ ಆಗಿತ್ತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ ರವರಿಂದಃ**

ದಿಃ06.12.2021 ರಂದು ನೀವು ನಿಪಿ2 ಕ್ಕೆ ಸಹಿ ಹಾಕಿರುತ್ತೀರಿ ಎಂದರೆ ಸರಿ.

**ಪಾಟೀಸವಾಲು ಆರೋಪಿತರ ಪರ ಶ್ರೀ ವೈ ಜಿ ವಕೀಲರಿಂದಃ**

ಪೊಲೀಸರು ನಿಪಿ2 ಕ್ಕೆ ಸಹಿ ಮಾಡಲು ಯಾವುದೇ ನೋಟಿಸ್ ನೀಡಿರುವುದಿಲ್ಲ. ಅಪಘಾತ ನಡೆಯಿತು ಎಂದು ಹೇಳಲಾಗುವ ವಾಹನಗಳು ಒಂದು ಗೂಡ್ಸ್ ವೆಹಿಕಲ್ ಹಾಗೂ ಒಂದು ಬಸ್ಸು. ನೀವು ಘಟನೆ ನಡೆಯಿತು ಎಂದು ಹೇಳಲಾಗುವ ಸ್ಥಳದಲ್ಲಿ ಹಲವಾರು ತರಕಾರಿ ಅಂಗಡಿಗಳು ಹಾಗೂ ಇತರೆ ವ್ಯಾಪಾರಿಗಳು ಇರುತ್ತಾರೆ ಎಂದರೆ

ಸರಿ. ಅಪಘಾತ ನಡೆಯಿತು ಎಂದು ಹೇಳಲಾಗುವ ಸ್ಥಳದಲ್ಲಿ ಸರ್ಕಾರಿ ಶಾಲೆ ಇದೆ ಎಂದರೆ ಸರಿ. ನೀವು ಹೇಳುವ ಸ್ಥಳದಲ್ಲಿ ಬ್ಯಾರಿಕೇಡ್ ಹಾಕಿದ್ದರು ಎಂದರೆ ಸರಿ. ಚಾಸಾ1 ರವರು ನಿಮ್ಮ ಸ್ನೇಹಿತರು ಎಂದರೆ ಸರಿ. ನನ್ನ ಸ್ವಂತ ವಾಸ ಬೈಲುಕುಪ್ಪೆ. ನಾನು ಮತ್ತು ಚಾಸಾ4 ರವರು ಘಟನಾ ದಿನದಂದು ಬೈಕಿನಲ್ಲಿ ಮೈಸೂರಿನ ಕಡೆಗೆ ಹೋಗುತ್ತಿದ್ದೆವು. ನಿಪಿ2 ಕ್ಕೆ ಚಾಸಾ1 ರವರು ಹೇಳಿದ ಮೇರೆರೆಗೆ ನೀವು ಸಹಿ ಹಾಕಿರುತ್ತೀರಿ ಎಂದರೆ ಸರಿಯಲ್ಲ. ನಿಪಿ2 ರಲ್ಲಿ ಕಂಡುಬರುವ ಸ್ಕೆಚ್ಚನ್ನು ಮಹಜರ್ ಸಮಯದಲ್ಲಿ ಮಾಡಿರುತ್ತಾರೆ. ನೀವು ನಿಪಿ2 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಹಾಕಿರುತ್ತೀರಿ ಎಂದರೆ ಸರಿಯಲ್ಲ. ನೀವು ಚಾಸಾ1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಹಾಗೂ ಅವರಿಗೆ ಪರಿಹಾರ ಸಿಗಲಿ ಎಂದು ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.